



ವಿನ್ಯಾಸಗಾರರು ತಯಾರಿಸಿರುತ್ತಾರೆ. ಹೆಚ್ಚಾಗಿ ರೇಷ್ಮೆ ಬಟ್ಟೆಗೆ ಜರತಾರಿ ಕುಸುರಿಯನ್ನೋ ಚಿನ್ನದ ದಾರದಿಂದ ಕುಂದನ್ ಕಲೆಯಿಂದಲೂ ವಿನ್ಯಾಸಗೊಳಿಸಿರುತ್ತಾರೆ. ತಲೆಯ ಮೇಲೊಂದು ಪೇಟ, ಅದರ ಮೇಲೊಂದು ವಿನ್ಯಾಸಪೂರ್ಣ ಬ್ರೋಚ್ ಇಡುವುದೂ ಇದೆ.

## ವೈವಿಧ್ಯಮಯ ಮದುಮಗಳ ದಿರಿಸು

ಮದುಮಗಳ ಬಟ್ಟೆಯಂತೂ ದೇಶದುದ್ದಕ್ಕೂ ಅತ್ಯಂತ ಸುಂದರ, ವೈವಿಧ್ಯಮಯ. ಇಡಿಯ ದೇಶದ ಚಿತ್ರಣವನ್ನು ಗಮನಿಸಿದರೆ ಕಾಶ್ಮೀರದ ಮದುಮಗಳು ಸುಂದರ ಕುಸುರಿ ನೇಯ್ಗೆಯ ಫೆರಾನ್ ಎಂಬ ಉದ್ದನೆಯ ನಿಲುವಂಗಿಯನ್ನೂ ಸಲ್ವಾರ್ ಕಮೀಜ್ ಅನ್ನೂ ಧರಿಸುವುದಿದೆ. ತಲೆಯಲ್ಲಿ ಧರಿಸುವ ಆಭರಣಗಳೂ ದುಪ್ಪಟ್ಟಾಗಳೂ ಅತ್ಯಂತ ಆಕರ್ಷಕ. ಅದಕ್ಕೊಪ್ಪುವ ಗ್ರಾಂಡ್ ಎನ್ನಿಸುವ ಆಭರಣಗಳೂ ತಲೆಯಿಂದ ಇಳಿಬಿಡುವ ಆಭರಣಗಳೂ ಮುತ್ತಿನ ಆಭರಣಗಳೂ ಮದುಮಗಳ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತವೆ. ಅಲ್ಲಿಯ ಹಿಂದೂ ಸಂಪ್ರದಾಯದವರು ಸೀರೆ ಉಡುವುದೂ ಇದೆ. ಇನ್ನು ರಾಜಸ್ಥಾನ, ಗುಜರಾತ್ ಪ್ರದೇಶಗಳಲ್ಲಿ ಘಾಗ್ರಾ, ಚೋಲಿ, ಲೆಹೆಂಗಾ ಮುಂತಾದುವನ್ನು ಧರಿಸುತ್ತಾರೆ. ವಿಶಿಷ್ಟವಾದ ಪನೇತರ್ ಎಂಬ ಸೀರೆಯನ್ನು ಮದುವೆಯ ಸಂದರ್ಭದಲ್ಲಿ ಧರಿಸಿದರೆ ಬಳಿಕ ಆಕೆಯ ಗಂಡನ ಮನೆಯಿಂದ ಕೊಡಲ್ಪಡುವ ಘರ್ಚೋಲಾ ಎಂಬ ಸೀರೆಯನ್ನು ಧರಿಸುತ್ತಾಳೆ. ಘರ್ಚೋಲಾ ಎಂಬುದು ವಿಶಿಷ್ಟ ರೇಷ್ಮೆ ನೂಲಿನಿಂದ ಕಛ್ ಪ್ರಾಂತದಲ್ಲಿ ತಯಾರಾಗಿ ಬಣ್ಣಕ್ಕಾಗಿ ಜಾಮ್‌ನಗರಕ್ಕೆ ತಂದು ಅಲ್ಲಿ ತಯಾರಾಗುವ ಸೀರೆಯಾಗಿದೆ. ಪಟೋಲಾ, ಪಟ್ವಾಲಾ ಸೀರೆಗಳೂ ಕೈಮಗ್ಗದಿಂದಲೇ ತಯಾರಿಸುವ ಗುಜರಾತಿನ ವಿಶಿಷ್ಟ ಸೀರೆಯಾಗಿದ್ದು ಮದುವೆಯ ಸಂದರ್ಭದಲ್ಲೂ ಅದನ್ನೂ ಉಡುವುದಿದೆ. ಮದುಮಗನು ಶೇರ್ವಾನಿ, ಕುರ್ತಾ, ಹೆಗಲಲ್ಲಿ ಅಂಗವಸ್ತ್ರ ಹಾಗೂ ತಲೆಗೊಂದು ಪೇಟ ಧರಿಸುತ್ತಾನೆ. ಆದರೆ ಇವೆಲ್ಲವನ್ನೂ ರೇಷ್ಮೆ ಬಟ್ಟೆಗಳಲ್ಲಿ ವಿಶೇಷವಾಗಿ ಮಾಡಿಸಿರುತ್ತಾರೆ. ಕುಂದನ್, ಟಿಕ್ಲಿ, ಜರಿ ನೂಲಿನ, ಜರ್ದೋಸಿ ಹಾಗೂ ವಿಶೇಷವಾಗಿ ಚಿನ್ನದ ನೂಲಿನ ನೇಯ್ಗೆಯನ್ನು ಮಾಡಿಸುವುದೂ ಇದೆ. ಪಶ್ಚಿಮ ಬಂಗಾಳದ ಮದುವಣಗಿತ್ತಿಯರು ವಿಶೇಷವಾದ ಬಿಳಿಯ ಬಣ್ಣದ ಬಂಗಾಳ ಜೂಟ್ ಸಿಲ್ಕ್ ಸೀರೆಯನ್ನೋ ಅಥವಾ ಬಲೂಚಾರಿ ರೇಷ್ಮೆಯ ಸೀರೆಗಳನ್ನೋ ಉಡುವುದು ಪದ್ಧತಿ. ಅವರು ಸೀರೆ ಉಡುವ ಪದ್ಧತಿಯೂ ಸುಂದರ.

ಉತ್ತರ ಪ್ರದೇಶದಲ್ಲಿ ಬನಾರಸ್ ಸೀರೆಯು ಅತ್ಯಂತ ಪ್ರಚಲಿತದಲ್ಲಿದ್ದು ಮದುಮಗಳಿಗೆ ಹೆಚ್ಚಾಗಿ ಇದನ್ನೇ ಉಪಯೋಗಿಸುತ್ತಾರೆ. ಬಿಹಾರದ ಮದುಮಗಳು ಅಲ್ಲಿನ ವಿಶಿಷ್ಟ ಭಾಗಲ್ಪುರಿ ಸಿಲ್ಕ್ ಅಥವಾ ಟಸ್ಸರ್ ಸಿಲ್ಕ್ ಸೀರೆಯನ್ನೇ ಉಟ್ಟು ಅದಕ್ಕೊಪ್ಪುವ ಆಭರಣಗಳನ್ನು ಧರಿಸುತ್ತಾಳೆ. ಅಸ್ಸಾಂ ಸುತ್ತಮುತ್ತಲ ರಾಜ್ಯಗಳಲ್ಲಿ ಮೇಕಲ ಎಂಬ ಮುಗಾ ಸಿಲ್ಕ್‌ನಿಂದ ತಯಾರಿಸಿದ ವಿಶೇಷ ಸೀರೆಯನ್ನೂ ಉಡುವುದಿದೆ. ಅದು ಕೇರಳ ಸೀರೆಯಂತೆ ಎರಡು ಅಥವಾ ಮೂರು ಭಾಗಗಳುಳ್ಳ ಸೀರೆ. ಈ ಸೀರೆಗಳ ನೆರಿಗೆಯ ಭಾಗದಲ್ಲಿ ಅತ್ಯಂತ ಸುಂದರವಾದ ವಿಶಿಷ್ಟ ನೂಲಿನ ನೇಯ್ಗೆಯೂ ಕಸೂತಿಯೂ ಇದ್ದರೆ ಸೆರಗಿನ ಭಾಗವನ್ನು ಹಗುರವಾದ ಬಟ್ಟೆಯಿಂದ